ದಿನಾಂಕಃ 22-08-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ವಿ. ಆರ್. ವಕೀಲರಿಂದಃ –**

ಬ್ಯಾಂಕ್ ದಾಖಲೆಗಳನ್ನು ಹೊರತುಪಡಿಸಿ ಆರೋಪಿಯು ರೇಣುಕಾ ಟ್ರೇಡರ್ಸ್ ಹೆಸರಿನಲ್ಲಿ RO Plant installation ಮಾಡಿಸಿದ ಬಗ್ಗೆ ಮಾಹಿತಿ ಇರುತ್ತದೆ. 11 ಹಳ್ಳಿಗಳಲ್ಲಿ ನಾನೇ ಮುಂದಾಳತ್ವವಹಿಸಿ RO Plant installation ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಳ್ಳಿಗಳ ಗ್ರಾಮ ಪಂಚಾಯಿತಿ ದಾಖಲೆಗಳಲ್ಲಿ ನನ್ನ ಬರವಣಿಗೆ / ಹಸ್ತಾಕ್ಷರ ಇರುತ್ತದೆ ಎಂದರೆ ಸರಿಯಲ್ಲ. RO Plant installation ಫೋಟೋಗಳಲ್ಲಿ ನಾನು ಇರುತ್ತೇನೆ ಎಂದರೆ ಸರಿಯಲ್ಲ. ನಾಮಫಲಕದಲ್ಲಿ ನನ್ನ ಹೆಸರು ಹಾಕಿಸಲಾಗಿರುತ್ತದೆ ಎಂದರೆ ಸರಿಯಲ್ಲ. 2014 ರಿಂದ 2019 ರವರೆಗೆ ಆರೋಪಿಯೊಂದಿಗೆ RO Plant installation ಕೆಲಸಗಳಲ್ಲಿ ಭಾಗವಹಿಸಿರುತ್ತೇನೆ. ಆರೋಪಿಯು ಬೇರೆ ಬೇರೆ ಕೆಲಸಗಳಲ್ಲಿ ನಿರತರಾಗಿದ್ದರಿಂದ RO Plant ಕೆಲಸಗಳಿಗೆ ಸಂಬಂಧಿಸಿದ ವಸ್ತುಗಳನ್ನು ತರಿಸಿಕೊಳ್ಳಲು ಹಾಗೂ ಹಣದ ವ್ಯವಹಾರಕ್ಕಾಗಿ ಚೆಕ್ಕುಗಳಿಗೆ ಸಹಿ ಮಾಡಿ ನನಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ.

2. ಆರೋಪಿಯ ಹೆಂಡತಿ ಮೃತಪಟ್ಟಿರುತ್ತಾರೆ. 2008 ರಿಂದ 2019 ರವರೆಗೂ ಆರೋಪಿಯೊಂದಿಗೆ ಉತ್ತಮ ಒಡನಾಟ ನನಗೆ ಇತ್ತು ಎಂದರೆ ಸರಿ. ನನ್ನನ್ನು ಆರೋಪಿಯ ಕುಟುಂಬದ ಸದಸ್ಯ ಎಂದು ತಿಳಿದುಕೊಂಡಿದ್ದರು ಸರಿ. ಆರೋಪಿಯು 2016 ರಲ್ಲಿ ವಿವಾಹವಾಗಿದ್ದು, ಮದುವೆ ಕಾರ್ಯಗಳಲ್ಲಿ ನಾನು ಓಡಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಐ-20 ಕಾರು ಖರೀದಿಸಲು ಅವರೊಂದಿಗೆ ನಾನು ದಾವಣಗೆರೆಗೆ ಹೋಗಿದ್ದೆ ಎಂದರೆ ಸರಿಯಲ್ಲ. 2019 ಸೆಪ್ಟಂಬರರವರೆಗೂ ಆರೋಪಿ ತುಂಬಾ ಸ್ಥಿತಿವಂತನಾಗಿದ್ದ ಎಂದರೆ ನನಗೆ ಗೊತ್ತಿಲ್ಲ. 2019 ನವೆಂಬರ್ ತಿಂಗಳಲ್ಲಿ ಆರೋಪಿಯ ಹೆಂಡತಿಗೆ ಹೆರಿಗೆ ಸಮಯದಲ್ಲಾದ ಆರೋಗ್ಯ ಸಮಸ್ಯೆಯಿಂದಾಗಿ 2020 ಫೆಬ್ರುವರಿವರೆಗೂ ಆಕೆಯ ಚಿಕಿತ್ಸೆಯಲ್ಲಿ ನಿರತರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿಃ 04-11-2019 ರಿಂದ ದಿಃ 02-02-2019 ರವರೆಗೆ ಆರೋಪಿಯು ಹೆಂಡತಿಯ ಚಿಕಿತ್ಸೆಯಲ್ಲಿದ್ದಾಗ ನಾನು ನಿಪಿ-1 ಮತ್ತು 2 ರ ಚೆಕ್ಕುಗಳನ್ನು ನಗದೀಕರಣಕ್ಕಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿ. ದಿಃ 16-12-2019 ರಂದು ನೋಟಿಸ ನೀಡಿರುತ್ತೇನೆ ಎಂದರೆ ಸರಿ. ದಿಃ 15-11-2019 ರಿಂದ ದಿಃ 02-02-2020 ರವರೆಗೆ ಆರೋಪಿಯು ಮಣಿಪಾಲ್ ಆಸ್ಪತ್ರೆಯಲ್ಲಿದ್ದಾಗ ನೋಟಿಸ್ ನೀಡಿರುತ್ತೇನೆ ಎಂದರೆ ಅವರು ಆಸ್ಪತ್ರೆಯಲ್ಲಿ ಇದ್ದಿದ್ದು ನನಗೆ ತಿಳಿದಿರಲಿಲ್ಲ. ಎಲ್ಲಾ ವಿಚಾರ ತಿಳಿದಿದ್ದರು ನೋಟಿಸು ಜಾರಿ ಆಗಬಾರದು ಎನ್ನುವ ಉದ್ದೇಶದಿಂದ ಅದೇ ಸಮಯದಲ್ಲಿ ನೋಟಿಸ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸಿ.ಸಿ . ನಂಃ **82/2020**

**ಪಿ.ಡಬ್ಲ್ಯೂಃ 1**

3. ನಿಪಿ–1 ಮತ್ತು 2 ರ ಚೆಕ್ಕುಗಳಲ್ಲಿ ಸಹಿಯನ್ನು ಹೊರತುಪಡಿಸಿ ಉಳಿದ ಬರವಣಿಗೆ ನನ್ನದೇ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಆರೋಪಿ ಹೇಳಿದ ಮೇರೆಗೆ ಬರೆದಿರುತ್ತೇನೆ ಎಂದು ನುಡಿದಿರುತ್ತಾರೆ. ನಿಪಿ–1 ಮತ್ತು 2 ರ ಚೆಕ್ಕುಗಳು RO Plant installation ಗೆ ಸಂಬಂಧಿಸಿದಂತೆ ನೀಡಿದ ಚೆಕ್ಕುಗಳು ಎಂದರೆ ಸರಿಯಲ್ಲ. ಆರೋಪಿಗೆ ಹಣ ನೀಡಲಾಗಿದೆ ಎಂದು ಹೇಳಲಾದ ದಿನಾಂಕದಂದು ನನ್ನ ಬಳಿ ಅಷ್ಟು ಮೊತ್ತ ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಹಣ ಕೊಟ್ಟ ಕಾಲಕ್ಕೆ ಯಾವುದೇ ಬರವಣಿಗೆ ಮಾಡಿಸಿಕೊಂಡಿರುವುದಿಲ್ಲ. ಬರೆಸಿಕೊಳ್ಳಲು ತೊಂದರೆ ಇತ್ತೆ ಎಂದರೆ ಸ್ನೇಹಿತರಾಗಿದ್ದ ಕಾರಣ ಬರೆಸಿಕೊಂಡಿರುವುದಿಲ್ಲ. ಬರೆದುಕೊಡಲು ನಾನು ಕೇಳಿರುವುದಿಲ್ಲ.

4. ಆರೋಪಿಯು ನನ್ನ ವಿರುದ್ಧ ಹೂಡಿರುವ ಓ.ಎಸ್. ನಂಃ 50/2023 ರಲ್ಲಿ ನಾನು ತಿಳಿಸಿದಂತೆ ಹಣ ನೀಡಿರುವ ಬಗ್ಗೆಯಾಗಲೀ ಈ ಪ್ರಕರಣದಲ್ಲಿ ಆರೋಪಿಗೆ ಹಣ ನೀಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಆರೋಪಿಗೆ ನಾನು ಕೊಡಬೇಕಾದ ರೂ. 26 ಲಕ್ಷಗಳ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಆರೋಪಿಯು RO Plant installation ಗೆ ಸಂಬಂಧಿಸಿದಂತೆ ನೀಡಿದ ನಿಪಿ–1 ಮತು 2ರ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ರೂ. 13 ಲಕ್ಷ ಹಣವನ್ನು ತೆಗೆದುಕೊಳ್ಳುವ ಅವಶ್ಯಕತೆ ಇರಲಿಲ್ಲ, ಹಾಗೆಯೇ ಹಣವನ್ನು ಯಾವುದೇ ಕಾಲಕ್ಕೂ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿಯು ದೂರಿನಲ್ಲಿ ತಿಳಿಸಿದಂತೆ ಯಾವುದೇ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

ತೆ.ನ್ಯಾ.ದಲ್ಲಿ ಬೆ. ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ.ಹೇ.ಕೆ.ಸರಿ ಇದೆ. ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,

ಹಿರೇಕೆರೂರು